ದಿನಾಂಕ 17.01.2014, 29.01.2014 ಅಧಿಸೂಚನೆಗಳಲ್ಲಿ ನೀಡಿರುವ ಮಾರ್ಗಸೂಚಿಗಳ ಪ್ರಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯ ಜಿಲ್ಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಹೊನ್ನಾವರ ಶರಾವತಿ ಸೇತುವೆಯ ಸುಂಕ ವಸೂಲಿ

293(445); ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)

ಅ) ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಿಂದ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಶರಾವತಿ ಸೇತುವೆಯಲ್ಲಿ ಶುಲ್ಕ ವಸೂಲಾತಿ ಮಾಡುತ್ತಿದ್ದು ಇದನ್ನು ಯಾವಾಗ ಅಂತ್ಯಗೊಳಿಸಲಾಗುತ್ತದೆ;

ಆ) ಈ ಸೇತುವೆಯಲ್ಲಿ ಶುಲ್ಕ ವಸೂಲಾತಿಯಿಂದ ಇಲ್ಲಿಯವರೆಗೆ ಸರ್ಕಾರಕ್ಕೆ ಬಂದ ಆದಾಯ ಎಷ್ಟು;

ಇ) ಇಲ್ಲಿಯವರೆಗೆ ಶುಲ್ಕ ವಸೂಲಾತಿಗಾಗಿ ಯಾರು ಯಾರಿಗೆ ಗುತ್ತಿಗೆ ನೀಡಲಾಗಿದೆ; (ವರ್ಷವಾರು ಮಾಹಿತಿ ನೀಡುವುದು)

ಈ) 2014–15ನೇ ಸಾಲಿನಲ್ಲಿ ಶುಲ್ಕ ವಸೂಲಾತಿಗಾಗಿ ಯಾವಾಗ ಟೆಮಡರ್ ಕರೆಯಲಾಗಿತ್ತು? (ಸಂಪೂರ್ಣ ವಿವರ ನೀಡುವುದು)

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ – 66 (ರಾಷ್ಟ್ರೀಯ ಹೆದ್ದಾರಿ 17ರ) ಕಿ.ಮೀ. 198.00 ರಲ್ಲಿ ಶರಾವತಿ ಸೇತುವೆ ಶುಲ್ಕ ವಸೂಲಾತಿ ಕೇಂದ್ರವಿದ್ದು, ಶುಲ್ಕ ವಸೂಲಾತಿಗಾಗಿ ಈಗಿನ ಗುತ್ತಿಗೆ ಅವಧಿಯ ದಿನಾಂಕ 31–03–2015 ರಂದು ಅಂತ್ಯಗೊಳ್ಳುತ್ತದೆ. ಕೇಂದ್ರ ಸರ್ಕಾರದ ಅಧಿಸೂಚನೆ ದಿನಾಂಕ 16–07–2008 ರಂದು ಭಾರತ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದಂತೆ ಈ ಶುಲ್ಕ ವಸೂಲಾತಿಯು ನಿರಂತರವಾಗಿ ಇರುತ್ತದೆ. ದಿನಾಂಕ 12–03–2014 ರಿಂದಲೇ ಸದರಿ ರಸ್ತೆಯನ್ನು

(ಕಿ.ಮೀ. 93,700 ರಿಂದ ಕಿ.ಮೀ. 283.00 ವರೆಗೆ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಭಾರತ ಸರ್ಕಾರ, ಇವರು ಹಸ್ತಾಂತರಿಸಿಕೊಂಡಿರುತ್ತಾರೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಪತ್ರ ಸಂಖ್ಯೆ: NHA/RO BNG/15026/4/ 2013–14/422, ದಿನಾಂಕ 12–03–2014 ರ ಪತ್ರದಂತೆ ಸದರಿ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸಿ ಶುಲ್ಕ ವಸೂಲಾತಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಪ್ರಾರಂಭಿಸುವವರೆಗೂ ಈ ವಲಯದಿಂದ ಶರಾವತಿ ಸೇತುವೆ ಶುಲ್ಕ ವಸೂಲಾತಿಯನ್ನು ಮಾಡಲಾಗುವುದು.

ಆ) ಈ ಶುಲ್ಕ ವಸೂಲಾತಿ ಕೇಂದ್ರದಿಂದ ದಿನಾಂಕ 31–05–2014 ರವರೆಗೆ ಸರ್ಕಾರಕ್ಕೆ ಬಂದ ಆದಾಯ ₹ 20,00,39,384/–

ಇ) ಶುಲ್ಕ ವಸೂಲಾತಿ ಪ್ರಾರಂಭವಾದ ದಿನದಿಂದ ಅಂದರೆ, ದಿನಾಂಕ 01–08–1997 ರಿಂದ ಈ ಕೆಳಗಿನ ಮೂರು ಗುತ್ತಿಗೆದಾರರು ಟೆಂಡರ್ ಪಡೆದಿರುತ್ತಾರೆ.

(1) ಶ್ರೀ ಎಂ.ಜಿ. ಮಿಲಾಂಟಾ, ಮಂಗಳೂರು
(2) ಶ್ರೀ ಡಿ.ಜಿ. ರಘುನಾಥ ಹರಿಹರ,
(3) ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ

ವರ್ಷವಾರು ಮಾಹಿತಿಯನ್ನು ಅನುಬಂಧ (1)ರಲ್ಲಿ ನೀಡಲಾಗಿದೆ.

ಈ) 2014–15ನೇ ಸಾಲಿನ ಈ ಕಾಮಗಾರಿಗಾಗಿ ದಿನಾಂಕ 23–12–2013 ರಲ್ಲಿ ಪ್ರಕಟಣೆ ಹೊರಡಿಸಲಾಗಿದ್ದು, ಅದರ ಪ್ರಕಾರ ಟೆಂಡರಿಗೆ ಸಂಬಂಧಪಟ್ಟ ದಿನಾಂಕಗಳು ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

(1) ಪೂರ್ವಭಾವಿ ಸಭೆಯ ದಿನಾಂಕ ಮತ್ತು ವೇಳೆ 16–1–2014, 11.00 ಘಂಟೆ

(2) ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ 17–01–2014, 16.00 ಘಂಟೆ

(3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ 20–01–2014, 11.00 ಘಂಟೆ

(4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ 24–01–2014, 11.00 ಘಂಟೆ

ಅನುಬಂಧ–1

ರಾಷ್ಟ್ರೀಯ ಹೆದ್ದಾರ ಸಂಖ್ಯೆ 17ರ ಕಿಮೀ. 198.00 ರಲ್ಲಿರುವ ಶರಾವತಿ ಸೇತುವೆ ಶುಲ್ಕ ವಸೂಲಾತಿ ಹಕ್ಕನ್ನು ಪಡೆದು ಗುತ್ತಿಗೆದಾರ ವಿವರಗಳು.

ಕ್ರ.ಸಂ.	ಅವಧಿ	ಗುತ್ತಿಗೆದಾರ ಹೆಸರು
1	1/08/1991 ರಿಂದ 02/09/1997	ಇಲಾಖಾ ವತಿಯಿಂದ
2	15/10/1997 ರಿಂದ 27/05/1998	ಶ್ರೀ ಎಂ.ಜಿ. ಮಿಲಾಂಟಾ
3	11/06/1998 ರಿಂದ 05/04/1999	ಶ್ರೀ ಡಿ.ಜಿ. ರಘುನಾಥ, ಹರಿಹರ
4	10/05/1999 ರಿಂದ 06/03/2000	ಶ್ರೀ ಡಿ.ಜಿ. ರಘುನಾಥ, ಹರಿಹರ
5	17/04/2000 ರಿಂದ 29/04/2002	ಶ್ರೀ ಡಿ.ಜಿ. ರಘುನಾಥ, ಹರಿಹರ
6	01/05/2002 ರಿಂದ 30/04/2005	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
7	01/05/2005 ರಿಂದ 31/05/2005	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
8	01/06/2005 ರಿಂದ 30/06/2005	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
9	01/07/2005 ರಿಂದ 3006/2008	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
10	01/07/2008 ರಿಂದ 15/06/2009	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
11	16/6/2009 ರಿಂದ 15/06/2012	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
12	16/6/2012 ರಿಂದ 31/12/2012	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
13	01/01/2013 ರಿಂದ 31/12/2013	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
14	01/01/2014 ರಿಂದ 31/03/2014	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ
15	01/04/2014 ರಿಂದ 31/03/2015	ಶ್ರೀ ಎನ್. ಕಿಶೋರ ಬಾಬು, ಬಳ್ಳಾರಿ